A.—**Sri Kadidal MANJAPPA** (Minister for Revenue and Public Works).—

(*a*) During 1948.
(*b*) Yes.
(*c*) Yes.
(*d*) Budget provision for 1952-53 .. Rs. 30,000
Expenditure for 1952-53 1,942

(*e*) Technical sanction is accorded to a detailed estimate amounting to Rs. 1,30,800. The work will be taken up after calling for tenders.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಸೇತುವೆ ಕಟ್ಟುವ ಉದ್ದೇಶವೇನು ?

ಶ್ರೀ ಕಡಿದಾಳ್ ಮಂಜಪ್ಪ.—ನದಿ ದಾಟುವುದು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ರೀತಿ ಸರ್ಕಾರದ ಉದ್ದೇಶವಾದ ಮೇಲೆ, ಈಗ ಹೊಣಸೂರು ಹತ್ತಿರ ಸೇತುವೆ ಕಟ್ಟಬೇಕೆಂಬುದನ್ನು ಬಿಟ್ಟು ಬೇರೆ ಜಾಗದಲ್ಲಿ ಕಟ್ಟಬೇಕೆಂದು ಹೇಳಿ ಈಗಿನ ಸ್ಥಳ ಸರಿಯಾಗಿಲ್ಲವೆಂದು ಯಾರಾದರೂ ತಿಳಿಸಿದ್ದಾರೆಯೇ ?

Sri Kadidal MANJAPPA.—The original site proposed for construction of a bridge was found to be sandy, and as it required a firm foundation that site had therefore to be changed. The estimate for the construction of a bridge on that site was Rs. 2,90,000 and now the cost may go up to 1,30,000

ಶ್ರೀ ಎಚ್. ಕೆ. ಶಿವರುದ್ರಪ್ಪ.—ಅಂದರೆ ಮೊದಲು ಕೊಟ್ಟಿರುವ ಅಂದಾಜಿಗಿಂತ ಈ ಸಾರಿ ಕೊಟ್ಟಿರುವ ಅಂದಾಜು ಕಡಮೆಯಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗಾದರೆ ದುಡ್ಡು ಉಳಿಸುವುದಕ್ಕೆ ಇದೊಂದು ಮಾರ್ಗವಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ದುಡ್ಡನ್ನುಳಿಸುವುದಕ್ಕೂ ಒಂದು ಮಾರ್ಗ. ಅಲ್ಲದೆ ಅದು sandy soil ಆಗಿತ್ತು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಜಾಗದಲ್ಲಿ ಸೇತುವೆಯನ್ನು ಕಟ್ಟುವುದರಿಂದ ಜನರಿಗೆ ಅನುಕೂಲವಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅನುಕೂಲವಾಗುತ್ತದೆಂದೇ ಕಟ್ಟುವುದು.

Tour of Sri K. C. Reddy, Minister for Production, Government of India, in the scarcity areas of Gundlupet Taluk.

Q.–459. **Sri H. K. SHIVARUDRAPPA** (Gundlupet-Heggaddevankote).—

Will the Government be pleased to state :—

(*a*) whether it has come to their notice that Sri K. C. Reddy, Minister for Production, Government of India, had undertaken a tour of the scarcity areas of Gundlupet Taluk with a view to have a first-hand knowledge of the conditions prevailing in those areas ;

(*b*) whether he has offered any suggestions to our Government in regard to the scarcity conditions there ;

(*c*) if so, the details thereof ;

(*d*) how far they have been implemented ?

A.—**Sri Kadidal MANJAPPA** (Minister for Revenue and Public Works).—

(*a*) Yes. Sri K. Chengalaraya Reddy toured in the scarcity areas in Gundlupet Taluk, on 13th September 1952.

(*b*) Yes.

(*c*) A copy of the progress report of action taken on the observations of the Minister during his tour is appended below.

(*d*) Of the 12 points observed, 5 points have been finally disposed of and necessary action is being taken in respect of the remaining points.

Progress report of action taken on the tour notes of the Union Minister for Production during his tour in Gundlupet Taluk on 13th September 1952.

Sl. No.	Items of observations	Action taken
1	*Hundipura.*—The A.D. well at Bachahalli which has been executed partially must be completed early.	If the grants for the current year permit of it, the work will be completed. Otherwise, sanction to additional grants will be sought for.
2	The Rachahalli D.W. Pond must be restored.	As there is some water in the pond, the question will be re-examined at the end of February 1953.
3	A new road must be formed from Hangala to Hullepura *via* Shivapura.	The District Board President, Mysore, undertook to examine this question. This is since proposed to be dropped.
4	A causeway must be constructed across the Kalkathehalla near Hundipura.	The District Board President, Mysore, undertook to examine this question.
5	*Bommalapura.*—Bommalapura breached tank may be restored immediately as this would serve not only as a Distress Relief but also as a Famine Insurance Work. The people also represented that they were prepared to pay the shares of contributions as per rules.	This question is ascertained to be under investigation by the Public Works Department.
6	Kodasoge.—The Biligere Katte (D.W. Pond) may be got repaired.	Necessary action is being taken to repair the pond.
7	A new road may be formed from Kempayyanakere to Bommalapura *via* Madalavadi Bommanahalli, Voddagere, Yeriyur and Ankahalli.	This has been completed through the Agency of the District Board.
8	Seed ಬಳಿಜೋಳ and seed ಬಂಗಾರಕಡ್ಡಿ paddy may be supplied early.	Existing stock of paddy was released. Further supply was not received. It is not necessary as the season is over.
9	*Seelavanthapura.*—The existing D.W. Pond may be restored, and the existing well may be deepened.	The existing well was deepened by nearly ten feet and there is seven and a half feet of water now.
10	*Terakanambi.*—Vadeyanakatte may be repaired.	As the work was under progress, rain set in and work had to be suspended as water came into the katte.
	(2) The existing well may be deepened. These two D.W. Ponds may be got desilted.	The work is going on through the V.P.

(SRI KADIDAL MANJAPPA.)

Sl. No.	Items of observations	Action taken
11	Another prayer that was made generally in that area was that Land Revenue (dry assessment) collections must be suspended in view of the adverse seasonal conditions prevailing in that area.	It is reported that the seasonal conditions did not justify any remission.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಕೆ. ಚೆಂಗಲರಾಯರೆಡ್ಡಿಯವರು ಗುಂಡ್ಲುಪೇಟೆ ಪ್ರದೇಶವನ್ನು ಸಂಚಾರ ಮಾಡಿ ಕೊಂಡು ಬಂದು ನಮ್ಮ ಸರ್ಕಾರದವರಿಗೆ ಒಂದು ಶಿಫಾರಸ್ಸು ಮಾಡಿದ್ದಾರೆಯೇ ಅಥವಾ ಒಂದು ಡೈರೆಕ್ಷನ್ ಕೊಟ್ಟಿದ್ದಾರೆಯೇ ?

Mr. SPEAKER.—There is the answer given.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಅವರು ಬರೀ ಶಿಫಾರಸು ಮಾಡಿದರೇ ಅಥವಾ ಒಂದು ಡೈರೆಕ್ಷನ್ ಕೊಟ್ಟರೇ ಎಂದು ನಾನು ಕೇಳಿದ್ದು !

ಶ್ರೀ ಕಡಿದಾಳ್ ಮಂಜಪ್ಪ.—ಅವರ ಟೂರ್ ನೋಟ್ಸನ್ನು ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಆ ಪ್ರದೇಶವನ್ನು distress area ಎಂದು ಹೇಳಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—Distress area ಎಂದು ಯಾವ ಯಾವ ಸ್ಥಳಗಳನ್ನು ಘೋಷಿಸಿದ್ದೇ ವೆಂದು ಹೇಳುವುದಕ್ಕೆ ನೋಟೀಸ್ ಬೇಕು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಶ್ರೀ ಕೆ. ಸಿ. ರೆಡ್ಡಿಯವರು distress area ಗಳನ್ನು ನೋಡಬೇಕೆಂದು ತಾನೆ ಅಲ್ಲಿಗೆ ಹೋದದ್ದು ?

ಶ್ರೀ ಕಡಿದಾಳ್ ಮಂಜಪ್ಪ.—ಆ ಪ್ರದೇಶಗಳನ್ನೆಲ್ಲಾ ನೋಡಬೇಕೆಂದು ಎಂದು ಹೇಳಿದ್ದಾರೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಆ ಪ್ರದೇಶವನ್ನು ಸಂಚಾರ ಮಾಡಿದುದರ ಉದ್ದೇಶವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಬರೀ ಸಂಚಾರ ಮಾಡಬೇಕೆಂದಲ್ಲ. ಅಲ್ಲಿನ ಜನರ ಕಷ್ಟ ಸುಖಗಳನ್ನು ನೋಡುವುದಕ್ಕೆ ಹೋದರು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಅವರು ಆ ಪ್ರದೇಶವನ್ನು ನೋಡಿ, ಅದು ಅಭಾವ ಪ್ರದೇಶವೆಂದು ಹೇಳಿದ್ದಾರಲ್ಲವೇ ?

Sri Kadidal MANJAPPA.—I am sorry, I have not got that information here.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈಗ ಅಲ್ಲಿ ರಿಲೀಫ್ ಕಾಮಗಾರಿಗಳನ್ನು ಕೈಕೊಂಡಿರುವುದನ್ನು ನೋಡಿದರೆ, ಅಲ್ಲಿ distress ಇದೆಯೆಂದು ತಾನೆ ತಾವು ಕೈಕೊಂಡಿದ್ದು !

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ರಿಲೀಫ್ ಕಾಮಗಾರಿ ಮಾಡುವುದು distress ಇದೆ ಎಂದು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗಿದ್ದಪಕ್ಷದಲ್ಲಿ ಈಗ ಸರ್ಕಾರವವರು ಕೈಕೊಂಡಿರುವ ಐದು ಕಾಮಗಾರಿ ಬಾಬುಗಳಿಗೆ ಎಷ್ಟು ಹಣ ಖರ್ಚುಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಐದು ಬಾಬುಗಳು ಮಾತ್ರವಲ್ಲ ; ಬಾಕಿ ಬಾಬುಗಳನ್ನೂ ಕೈಕೊಂಡಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಐದು ಬಾಬುಗಳು ಎಂದು ಇಲ್ಲೇ ಹೇಳಿದೆ ; ಇದಕ್ಕೆ ಖರ್ಚೆಷ್ಟಾಗಿದೆ ?

Sri Kadidal MANJAPPA.—I am sorry. I will let you know later.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈಗ ನಿಮ್ಮಿಂದ ಪರೀಕ್ಷಿಸಲ್ಪಟ್ಟಿರುವ ಕಾಮಗಾರಿಗಳಲ್ಲಿ ಡಿಸ್ಪ್ಯೂಟ್ ಬೋರ್ಡಿನವರು ಪರಿಶೀಲಿಸಬೇಕಾದ್ದಿದೆಯೇ ! ಅವರು ಅವರ ಕೆಲಸವನ್ನು ಪೂರ್ತಿ ಮಾಡಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದರಲ್ಲೆ ಹೇಳಿದೆಯಲ್ಲ !

ಶ್ರೀ ಎಚ್. ಕೆ. ಶಿವರುದ್ರಪ್ಪ.—ಅವರು ಪರಿಶೀಲಿಸಿಕೊಂಡಿರತಕ್ಕ ಕೆಲಸಗಳನ್ನು ಮಾಡಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಕಂದಾಯದ ರೆಮಿಷ್ಷನ್ ಕೊಡಬೇಕೆಂದು ಕೇಂದ್ರ ಮಂತ್ರಿಗಳು ಹೇಳಿದ್ದರೂ ಕೂಡ, ಹಾಗೆ ರೆಮಿಷ್ಷನ್ ಮಾಡುವುದಕ್ಕೆ ಯಾವ ಕಾರಣವೂ ಕಂಡುಬಂದಿಲ್ಲವೆಂದು ಹೇಳುವುದಕ್ಕೆ, ಅವರು ಅಂಕಿ ಅಂಶಗಳ ಆಧಾರವಿಲ್ಲದೆಯೇ ಹಾಗೆ ಹೇಳಿದರೇ ?

ಶ್ರೀ ಕಡಿದಾಳ್ ಮಂಜಪ್ಪ.—ನಿಬಂಧನೆಗಳ ಪ್ರಕಾರ ಎಷ್ಟಾಣೆಗಿಂತ ಕಡಮೆ ಹೈರು ಆಗಿರಬೇಕೆಂದಿದೆಯೋ ಅದಕ್ಕಿಂತ ಹೆಚ್ಚಾಗಿ ಆಗಿರುವುದರಿಂದ ರೆಮಿಷ್ಷನ್ ಕೊಡಲಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗಾದರೆ distress ಇದೆ ಎಂದು ಏಕೆ ಪರಿಗಣಿಸಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಡಿಸ್ಟ್ರೆಸ್ ಇದೆಯೆಂದು ಹೇಳಿ ಎಷ್ಟು ನಾಲ್ಕಾಣೆಗಿಂತ ಕಡಮೆ ಬೆಳೆ ಆಗಿದೆ ಎಂದು

ವರದಿ ಕಳುಹಿಸುತ್ತಾರೋ ಅಲ್ಲಿಗೆ ರೆಮಿಷ್ಕೊಡುತ್ತೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗಾದರೆ ಗುಂಡ್ಲು ಪೇಟೆ ತಾಲ್ಲೂಕಿನಲ್ಲಿ ಸರಿಯಾಗಿ ಮಳೆ ಬೆಳೆಯಾಗಿದೆಯೇ ?

Sri Kadidal MANJAPPA.—That is coming to the distress question Sir. If the Hon'ble member wants, I can furnish it later on.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಇದನ್ನು ತನಿಖೆ ಮಾಡಿ ಹೇಳಿದವರು ಯಾರು ? ಅಲ್ಲಿ ಎಷ್ಟಾಣೆ ಬೆಳೆಯಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ರೆಮಿಷ್ಕ ಸ್ಟೇಟ್‌ಮೆಂಟ್ ಇನ್ನೂ ಬರುವುದರೊಳಗೇ ಇದೇ. ಆದ್ದರಿಂದ ಕರಾರುವಾಕ್ಕಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈಗಲಾದರೂ ಪುನರ್ಮಾರ್ಶೆ ಮಾಡಿ ರೆಮಿಷ್ಕ ಕೊಡುವುದಕ್ಕೆ ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲೆಲ್ಲಿ ರೆಮಿಷ್ಕ ಕೊಡುವುದರ ಅವಶ್ಯಕತೆಯಿದೆಯೋ ಅಲ್ಲಿ ಕೊಟ್ಟಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಪ್ರದೇಶವನ್ನು ಪುನಃ ಪರಿಶೀಲಿಸಿ ರೆಮಿಷ್ಕಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲೇ ಹೇಳಿದ್ದೇನೆ. ಕಾನೂನು ಪ್ರಕಾರ 4 ಆಣೆಗಿಂತ ಕಡಮೆ ಬೆಳೆ ಎಲ್ಲೆಲ್ಲಿ ಆಗಿದೆಯೋ ಅಲ್ಲಿಗೆಲ್ಲಾ ಕೊಡುತ್ತೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಸಾಮಾನ್ಯವಾಗಿ ನಾಲ್ಕಾಣೆಗಿಂತ ಕಡಮೆ ಬೆಳೆಯೇ ಆಗಿದ್ದರೂ ಅಧಿಕಾರಿಗಳು ನಾಲ್ಕಾಣೆಗಿಂತ ಹೆಚ್ಚಿಗೆಯೇ ಹೇಳಿ ಎರೆಯಿಸುವುದು ತಮಗೆ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ. —ನಾನು ಅದನ್ನು ಒಪ್ಪುವುದಿಲ್ಲ. ನೀವು ಈ ತಾಲ್ಲೂಕು ಡಿಸ್ಟೈಸ್ ಪ್ರದೇಶವೆಂದು ಪರಿಗಣಿಸಲ್ಪಟ್ಟಿದೆಯೇ ಎಂದು ಕೇಳಿದ್ದಿರಿ. This aluk is considerd as a Scarcity area.

ಶ್ರೀ ಎಚ್. ಕೆ. ಶಿವರುದ್ರಪ್ಪ.—Scarcity area ಎಂದು ಹೇಳಿದ ಮೇಲೆ ಪರಿಹಾರ ಕೊಡಬೇಕಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೊಟ್ಟಿದೆಯೆಂದು ಆಗಲೇ ಹೇಳಿದೆನಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈಗ ತಾವು ಕೈಗೊಂಡಿರತಕ್ಕ ಡಿಸ್ಟೈಸ್ ರಿಲೀಫ್ ಕಾಮಗಾರಿಗಳನ್ನು ನಾಡಿಸಿಕೊಟ್ಟು ಅಲ್ಲಿಗೆ ರೆಮಿಷ್ಕ ಪರಿಹಾರವನ್ನು ಇದಗಿಸಿಕೊಡಬೇಕೆಂದು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿನ ಸ್ಥಿತಿಗತಿಗಳಿಗನುಸಾರವಾಗಿ ಪರಿಹಾರ ಕೊಡುವುದಕ್ಕೆ ಯೋಚನೆ ಮಾಡುತ್ತೇವೆ.

———

Kadur–Mangalore Railway Line.

Q.–474. Srimathi B. L. SUBBAMMA.–(Chickmagalur-Mudigere).—

Will the Government be pleased to state :—

(*a*) the number of years that have elapsed since the survey work of the Kadur–Mangalore Railway line was conducted ;

(*b*) the steps taken by the Government of Mysore in this behalf ?

A.—Sri Kadidal MANJAPPA.—

(*a*) About 25 years.

(*b*) The Railway Board have been addressed to include this line in the programme of new railway constructions.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಮೊದಲನೆಯ ವರ್ಷದ ಯೋಜನೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ಎಷ್ಟು ರೈಲ್ವೆ ರೈನುಗಳನ್ನು ಸೇರಿಸಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳು ಈಗ ನನ್ನಲ್ಲಿಲ್ಲ ; ಚಿಕ್ಕಮಗಳೂರು—ಹಾಸನ—ಮಂಗಳೂರು ರೈನನ್ನು ತಗೆದುಕೊಳ್ಳಬೇಕೆಂದು ಬರೆದಿದ್ದೇವೆ, ರೈಲ್ವೆ ಬೋರ್ಡಿನವರಿಗೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ರೈಲ್ವೆಬೋರ್ಡಿನಲ್ಲಿ ಮೈಸೂರು ಸಂಸ್ಥಾನದ ಸದಸ್ಯರಿದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.— ನಮ್ಮ ಸಂಸ್ಥಾನದ ಡಿಸ್ಟ್ರಿಕ್ಟುಗಳ ಪೈಕಿ ಯಾವ ಡಿಸ್ಟ್ರಿಕ್ಟಿನಲ್ಲಿ ರೈಲ್ವೆ ಸೌಕರ್ಯವಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿ.

ಶ್ರೀ ಬಿ. ಎಲ್. ಸುಬ್ಬಮ್ಮ.—ಈ ಡಿಸ್ಟ್ರಿಕ್ಟಿನಲ್ಲಿ ಎಷ್ಟು ರೈಲ್ವೆ ಸೆಸ್ ವಸೂಲು ಮಾಡಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಡಿಸ್ಟ್ರಿಕ್ಟಿಗೆ ರೈಲ್ವೆ ಸೌಕರ್ಯ ಅಗತ್ಯವೆಂಬುದು ತಮ್ಮ ಗಮನಕ್ಕೆ ಬಂದಿದೆಯ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕಳೆದ ನವೆಂಬರ್ ತಿಂಗಳಲ್ಲೇ ಬರೆದಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹಾಸನ–ಮಂಗಳೂರು ರೈಲ್ ಎಂದು ಹೇಳಿದಿರಿ.....

ಶ್ರೀ ಎಚ್. ಸಿದ್ದವೀರಪ್ಪ.—ನಾನು ಟ್ಯಾಸ್ಕ್‌ಫೋರ್ಸ್ ಕಮಿಟಿ ಮೀಟಿಂಗಿಗೆ ಹೋಗಿದ್ದಾಗ ಚಿಕ್ಕಮಗಳೂರಿಗೆ ರೈಲಿನ ಅವಶ್ಯಕತೆಯುಡೆಯೆಂಬುದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇನೆ.

ಅಧ್ಯಕ್ಷರು.—ಕೇಂದ್ರ ಸರ್ಕಾರದಿಂದ ದೊರೆತಿರುವ ಉತ್ತರದಲ್ಲಿ ಕೂಡ ಮುಂದಿನ ವರ್ಷದ ಯೋಜನೆಯಲ್ಲಿ ಸೇರಿಸುವುದಾಗಿ ತಿಳಿಸಿದ್ದಾರೆಂದು ವೃತ್ತ ಪತ್ರಿಕಗಳಲ್ಲಿ ಪ್ರಕಟವಾಗಿದೆ.

———